

ದೊರೆ ವಿನಂತಿಯನ್ನು ಓದಿದ. 'ತಂದೆಯ ಕೋರಿಕೆ ಈಡೇರಿಸುವುದು ಮುಖ್ಯವೇ. ಆದರೆ ಯೋಗ್ಯನಾದ ಬಡಗಿ ಯಾರಿದ್ದಾನೆ? ಸ್ವರ್ಗಕ್ಕೆ ಕಳುಹಿಸುವ ದಾರಿ ಹೇಗೆ?' ಎಂದು ಕೇಳಿದ. ಚಿತ್ರಕಾರನು, 'ನನ್ನ ಮನೆಯ ಬಳಿ ಅದ್ವಿತೀಯ ಕಾಷ್ಠಶಿಲ್ಪಿ ಗೆಂಡೊಂಗ್ ಎಂಬವನಿದ್ದಾನೆ. ಅವನ ಮನೆಯ ಸನಿಹ ಒಂದು ಭಾರೀ ಒಣಮರ ಬಿದ್ದುಕೊಂಡಿದೆ. ಅದರ ಮಧ್ಯೆ ಒಂದು ದೊಡ್ಡ ಟೊಳ್ಳಿದೆ. ಇದರಲ್ಲಿ ಬಡಗಿಯನ್ನು ಇರಿಸಿ ಹೊರಗಿನಿಂದ ಭದ್ರವಾಗಿ ಮುಚ್ಚಿ ಮರಕ್ಕೆ ಬೆಂಕಿ ಹಾಕಬೇಕು. ಮರ ಪೂರ್ತಿ ಉರಿದಾಗ ಬಡಗಿ ಸ್ವರ್ಗ ಸೇರುತ್ತಾನೆ. ಅಲ್ಲಿ ಕೆಲಸ ಮುಗಿಸಿ ವಿಮಾನದಲ್ಲಿ ಕುಳಿತುಕೊಂಡು ಮರಳುತ್ತಾನೆ' ಎಂದ.

ಕೂಡಲೇ ದೊರೆ ಬಡಗಿಯನ್ನು ಕರೆಸಿದ. ಸ್ವರ್ಗಕ್ಕೆ ಹೋಗಿ ಭವನವನ್ನು ನಿರ್ಮಿಸಿ ಬರಲು ಆಜ್ಞಾಪಿಸಿದ. ಸ್ವರ್ಗಕ್ಕೆ ಹೋಗುವ ವಿಧಾನವನ್ನು ವಿವರಿಸಿದ. ತನ್ನನ್ನು ನಾಶ ಮಾಡಲು ಸ್ನಾಲೊಂಗ್ ಹೆಣೆದ ಕುತಂತ್ರ ಇದು ಎಂದು ಬಡಗಿಗೆ ಹೊಳೆಯಿತು. ಆದರೆ ದೊರೆಗೆ ಈ ವಿಷಯವಾಗಿ ಏನು ಹೇಳಿದರೂ ಅವನು ನಿರ್ಧಾರವನ್ನು ಬದಲಾಯಿಸಲಾರ. ಆದ ಕಾರಣ, 'ಹಾಗೆಯೇ ಆಗಲಿ. ತಿಂಗಳುಗಳ ಕಾಲ ಸ್ವರ್ಗದಲ್ಲಿರಬೇಕಾದ ಕಾರಣ ಮನೆಗೆ ಬೇಕಾದ ದವಸ, ಧಾನ್ಯಗಳು ಮತ್ತಿತರ ವ್ಯವಸ್ಥೆಗಳನ್ನು ಮಾಡಲು ಒಂದು ವಾರ ಅವಕಾಶ ಕೊಡಿ' ಎಂದು ಕೇಳಿಕೊಂಡ. ಈ ಅವಧಿಯಲ್ಲಿ ಯಾರಿಗೂ ತಿಳಿಯದಂತೆ ಮರದ ಟೊಳ್ಳು ಇರುವ ಭಾಗದಲ್ಲಿ ಒಂದು ಸುರಂಗ ಮಾರ್ಗವನ್ನು ತನ್ನ ಮನೆಯ ಒಳಭಾಗದವರೆಗೆ ನಿರ್ಮಿಸಿಕೊಂಡ. ವಾರದ ಗಡು ಮುಗಿದಾಗ ರಾಜಭಟರು ಬಂದು ಅವನನ್ನು ಮರದ ಟೊಳ್ಳಿನೊಳಗೆ ಕಳುಹಿಸಿ ಹೊರಗಿನಿಂದ ಮುಚ್ಚಿದರು. ಮರಕ್ಕೆ ಎಲ್ಲ ಭಾಗಗಳಿಂದಲೂ ಬೆಂಕಿ ಹಚ್ಚಿದರು. ಮರ ಧಗಧಗನೆ ಉರಿದು ಬೂದಿಯಾಯಿತು. ತನಗೆ ನೆರವಾಗದ ಬಡಗಿ ಹೀಗೆ ಅಂತ್ಯವಾದನೆಂದು ಕಲಾವಿದ ಸಂತಸದಿಂದ ಕುಣಿದಾಡಿದ. ಆದರೆ ಬಡಗಿ ಸುರಂಗದ ಮೂಲಕ ಮನೆಗೆ ಸೇರಿಕೊಂಡಿದ್ದ.

ತಿಂಗಳುಗಳು ಕಳೆದವು. ರಹಸ್ಯವಾಗಿ ಮನೆಯೊಳಗೆ ಉಳಿದಿದ್ದ ಬಡಗಿ ಒಂದು ದಿನ ಗಡ್ಡ ಮೀಸೆಗಳನ್ನು ಬೆಳೆಸಿಕೊಂಡು ದೊರೆಯ ಬಳಿಗೆ ಹೋದ. ದೊರೆಗೆ ಅವನ ಗುರುತು ಸಿಗಲಿಲ್ಲ. 'ಯಾರು ನೀನು?' ಎಂದು ಕೇಳಿದ. 'ನಾನು ಬಡಗಿ ಗೆಂಡೊಂಗ್. ನಿಮ್ಮ ತಂದೆಯ ಭವನ ನಿರ್ಮಾಣಕ್ಕೆ ಸ್ವರ್ಗಕ್ಕೆ ಹೋಗಿದ್ದನಲ್ಲ. ಕೆಲಸ ಮುಗಿಸಿ ಮರಳಿ ಬಂದಿದ್ದೇನೆ' ಎಂದು ಹೇಳಿದ ಬಡಗಿ. 'ಹೌದೆ? ನನ್ನ ತಂದೆಗೆ ಖುಷಿಯಾಯಿತೆ? ಇನ್ನೇನು ಹೇಳಿದರು?' ಎಂದು ಕೇಳಿದ ದೊರೆ. 'ಎಲ್ಲಿಯ ಖುಷಿ ದೊರೆಯೆ? ಭವನವೇನೋ ಚೆನ್ನಾಗಿದೆ. ಆದರೆ ಚಿತ್ರ ಬರೆದು ಭವನವನ್ನು ಸಿಂಗರಿಸಬೇಕಾದ ಕಲಾವಿದ ಸ್ನಾಲೊಂಗ್ ಇನ್ನೂ ಬಂದಿಲ್ಲ. ಕೂಡಲೇ ಅವನನ್ನು ಇಲ್ಲಿಗೆ ಕಳುಹಿಸಲು ನನ್ನ ಮಗನಿಗೆ ಹೇಳು ಎಂದಿದ್ದಾರೆ. ನನ್ನನ್ನು ಸ್ವರ್ಗಕ್ಕೆ ಕಳುಹಿಸಿದ ರೀತಿಯಲ್ಲಿಯೇ ಒಣಮರದ ಟೊಳ್ಳಿನೊಳಗೆ ಅವನನ್ನಿರಿಸಿ ಬೆಂಕಿ ಹಚ್ಚಿ ಕಳುಹಿಸಿದರಾಯಿತು' ಎಂದ ಗೆಂಡೊಂಗ್. ತಂದೆಯನ್ನು ತುಂಬ ಪ್ರೀತಿಸುತ್ತಿದ್ದ ದೊರೆ ಭಟರನ್ನು ಕಳುಹಿಸಿ ಸ್ನಾಲೊಂಗ್‌ನನ್ನು ಕರೆತರಿಸಿದ. ಒಂದು ಮರದ ಟೊಳ್ಳಿನಲ್ಲಿ ಅವನನ್ನು ಸೇರಿಸಿ ಹೊರಗಿನಿಂದ ಭದ್ರವಾಗಿ ಮುಚ್ಚಳ ಹಾಕಿದ. ತಾನೇ ನಿಂತು ಮರಕ್ಕೆ ಬೆಂಕಿ ಕೊಡಿಸಿ ಅವನನ್ನು ಸ್ವರ್ಗಕ್ಕೆ ಕಳುಹಿಸಿದ.

**(ಟಿಬೇಟಿನ ಕತೆ)**